# ಭಾರತ ವಾಣಿಜ್ಯ ಕ್ಷೇತ್ರದಲ್ಲಿ 3.5 ಟ್ರಿಲಿಯನ್ ನಷ್ಟು ಆರ್ಥಿಕತೆ ಅಭಿವೃದ್ಧಿ: ಬಿ.ಎನ್. ಶ್ರೀಧರ್




ಬೆಂಗಳೂರು ನಗರ: ಭಾರತ ವಾಣಿಜ್ಯ ಕ್ಷೇತ್ರದಲ್ಲಿ 3.5 ಟ್ರಿಲಿಯನ್ ನಷ್ಟು ಆರ್ಥಿಕತೆ ಅಭಿವೃದ್ಧಿಯಾಗಿದೆ ಎಂದು ರಾಷ್ಟ್ರೀಯ ಕೌಶಲ್ಯ ತರಬೇತಿ ಸಂಸ್ಥೆ , ಪ್ರಾದೇಶಿಕ ನಿರ್ದೇಶಕರಾದ ಬಿ.ಎನ್ ಶ್ರೀಧರ್ ತಿಳಿಸಿದರು.

ಅವರು ನಗರದ ಹೊಸೂರು ರಸ್ತೆಯಲ್ಲಿರುವ ಎನ್‌ಎಸ್‌ಟಿಐ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ 'ಸ್ಕಿಲ್ ಫೆಸ್ಟ್ -2023' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಸರ್ಕಾರವು 'Make in India' ಯೋಜನೆಯನ್ನು ಜಾರಿಗೆ ತಂದ ನಂತರ ಅನೇಕ ನಿರುದ್ಯೋಗಿಗಳಿಗೆ ಅದರಲ್ಲೂ ಐಟಿಐ, ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗುತ್ತಿದೆ ಎಂದರು.

ರಾಷ್ಟ್ರೀಯ ಕೌಶಲ್ಯ ತರಬೇತಿ ಸಂಸ್ಥೆಯ ಅಡಿಯಲ್ಲಿ ಇರುವ ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಡಿಸೈನ್ ಮತ್ತು ಡೆಕೊರೇಷನ್, ಫ್ಯಾಷನ್ ಡಿಸೈನ್ ಟೆಕ್ನಾಲಜಿ, ಸಿ.ಎಸ್.ಎ/ ಐ.ಟಿ ಮುಂತಾದ ಕೋರ್ಸ್‌ಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ಆ ಪ್ರದೇಶಗಳಲ್ಲಿ ಕೆಲಸ ಮಾಡುವ ವೃತ್ತಿಪರರೊಂದಿಗೆ ಸಂವಹನ ನಡೆಸಲು ಉಪಯೋಗವಾಗುತ್ತದೆ ಎಂದರು.

ಇಲ್ಲಿ ತರಬೇತಿ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ, ತರಬೇತಿಗಾರರಿಗೆ ಉತ್ತಮ ಉದ್ಯೋಗಾವಕಾಶ ಸಿಗಲಿದ್ದು, ಜೊತೆಗೆ ಅವರ ಆಸಕ್ತಿಗಳನ್ನು ಹಂಚಿಕೊಳ್ಳುವ ಇತರ ತರಬೇತಿದಾರರೊಂದಿಗೆ ಸಂಪರ್ಕ ಏರ್ಪಡುತ್ತದೆ. ಎಂದರು.

ಈ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ತರಬೇತಿಗಾರರ ಕೌಶಲ್ಯವನ್ನು ಪ್ರದರ್ಶಿಸಲು ಫೆಸ್ಟ್ ಆಯೋಜಿಸಲಾಗಿದೆ. ವಿದ್ಯಾರ್ಥಿಗಳಿಗೆ ತಮ್ಮ ತರಬೇತಿಯ ಭಾಗವಾಗಿ ತಯಾರಿಸಿದ ಯೋಜನೆಗಳು ಮತ್ತು ಮಾದರಿಗಳನ್ನು ಫೆಸ್ಟ್‌ನಲ್ಲಿ ಪ್ರದರ್ಶಿಸಲಾಯಿತು.


'ಇನ್‌ಸ್ಟಿಟ್ಯೂಟ್ ಡೇ 2023' ನಲ್ಲಿ ನಡೆಸಿದ ಸಾಂಸ್ಕೃತಿಕ ಸಮಾರಂಭದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಿಲಿಕಾನ್ ಮೈಕ್ರೋ ಸಿಸ್ಟಮ್‌ನ ಸಿಇಒ ಎಂ.ಎಸ್.ಜೆ ಆರಾಧ್ಯ, ಪ್ರೋವೋಸ್ಟ್ ಯುಜಿಡಿಸಿಟ್‌ನ ವೆಂಕಟೇಶ್ ಸುಂಕಡ್, ಜೆ.ಎಸ್.ಎಸ್ ಅಕಾಡಮಿ ಬೆಂಗಳೂರಿನ ನಿರ್ದೇಶಕರು ಟಿ.ಎಂ ಶಶಿಕಲಾ, ಇತರೆ ಗಣ್ಯರು ವೇದಿಕೆಯಲ್ಲಿ ಇದ್ದರು.

# ಭಾರತ ವಾಣಿಜ್ಯ ಕ್ಷೇತ್ರದಲ್ಲಿ 3.5 ಟ್ರಿಲಿಯನ್ ನಷ್ಟು ಆರ್ಥಿಕತೆ ಅಭಿವೃದ್ಧಿ: ಬಿ.ಎನ್.ಶ್ರೀಧರ್

**ಬೆಂಗಳೂರು ನಗರ ಜಿಲ್ಲೆ :** ಭಾರತ ವಾಣಿಜ್ಯ ಕ್ಷೇತ್ರದಲ್ಲಿ 3.5 ಟ್ರಿಲಿಯನ್ ನಷ್ಟು ಆರ್ಥಿಕತೆ ಅಭಿವೃದ್ಧಿಯಾಗಿದೆ ಎಂದು ರಾಷ್ಟ್ರೀಯ ಕೌಶಲ್ಯ ತರಬೇತಿ ಸಂಸ್ಥೆ **(NSTI)** (ಮಹಿಳೆಯರ), ಪ್ರಾದೇಶಿಕ ನಿರ್ದೇಶಕರಾದ ಬಿ.ಎನ್ ಶ್ರೀಧರ್ ಅವರು ತಿಳಿಸಿದರು.

ನಗರದ ಹೊಸೂರು ರಸ್ತೆಯಲ್ಲಿರುವ ಎನ್‌ಎಸ್‌ಟಿಐ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ 'ಸ್ಕಿಲ್ ಫೆಸ್ಟ್ –2023' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರ್ಕಾರವು 'Make in India' ಯೋಜನೆಯನ್ನು ಜಾರಿಗೆ ತಂದ ನಂತರ ಅನೇಕ ನಿರುದ್ಯೋಗಿಗಳಿಗೆ ಅದರಲ್ಲೂ ಐಟಿಐ, ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ




ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗುತ್ತಿದೆ ಎಂದರು.

ರಾಷ್ಟ್ರೀಯ ಕೌಶಲ್ಯ ತರಬೇತಿ ಸಂಸ್ಥೆಯ ಅಡಿಯಲ್ಲಿ ಇರುವ ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಡಿಸೈನ್ ಮತ್ತು ಡೆಕೊರೇಷನ್, ಫ್ಯಾಷನ್ ಡಿಸೈನ್ ಟೆಕ್ನಾಲಜಿ, ಸಿ.ಎಸ್.ಎ/ ಐ.ಟಿ ಇನ್ನೂ ಮುಂತಾದ ಕೋರ್ಸ್‌ಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ಆ ಪ್ರದೇಶಗಳಲ್ಲಿ ಕೆಲಸ ಮಾಡುವ ವೃತ್ತಿಪರರೊಂದಿಗೆ ಸಂವಹನ ನಡೆಸಲು ಉಪಯೋಗವಾಗುತ್ತದೆ ಎಂದರು.

ಇಲ್ಲಿ ತರಬೇತಿ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ, ತರಬೇತಿಗಾರರಿಗೆ ಉತ್ತಮ ಉದ್ಯೋಗಾವಕಾಶ ಸಿಗಲಿದ್ದು, ಜೊತೆಗೆ ಅವರ ಆಸಕ್ತಿಗಳನ್ನು ಹಂಚಿಕೊಳ್ಳುವ ಇತರ ತರಬೇತಿದಾರರೊಂದಿಗೆ ಸಂಪರ್ಕ ಏರ್ಪಡುತ್ತದೆ. ತರಬೇತಿದಾರರು ಮೊಡಲಿಂಗ್,ಇಂಟರ್ನ್‌ಶಿಪ್, ಅಪ್ರೆಂಟಿಸ್ ನಂತಹ ಕೌಶ್ಯಾಭಿವೃದ್ಧಿ ಬೆಳಸಿಕೊಳ್ಳಬೇಕು ಎಂದರು.

ಈ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ತರಬೇತಿಗಾರರ ಕೌಶಲ್ಯವನ್ನು ಪ್ರದರ್ಶಿಸಲು ಫೆಸ್ಟ್ ಆಯೋಜಿಸಲಾಗಿದೆ. ವಿದ್ಯಾರ್ಥಿಗಳಿಗೆ ತಮ್ಮ ತರಬೇತಿಯ ಭಾಗವಾಗಿ ತಯಾರಿಸಿದ ಯೋಜನೆಗಳು ಮತ್ತು ಮಾದರಿಗಳನ್ನು ಫೆಸ್ಟ್‌ನಲ್ಲಿ ಪ್ರದರ್ಶಿಸಲಾಯಿತು.

ನಂತರ, ಸಂಜೆ 'ಇನ್‌ಸ್ಟಿಟ್ಯೂಟ್ ಡೇ 2023' ನಲ್ಲಿ ನಡೆಸಿದ ಸಂಸ್ಕೃತಿಕ ಸಮಾರಂಭದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರದವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಿಲಿಕಾನ್ ಮೈಕ್ರೋ ಸಿಸ್ಟಮ್ ನ ಸಿಇಒ ಎಂ.ಎಸ್.ಜೆ ಆರಾಧ್ಯ, ಪ್ರೊವೋಸ್ಟ್ ಯುಜಿಡಿಸಿಟ್ ನ ವೆಂಕಟೇಶ್ ಸುಂಕಡ್, ಜೆ.ಎಸ್.ಎಸ್ ಅಕಾಡಮಿ ಬೆಂಗಳೂರಿನ ನಿರ್ದೇಶಕರು ಟಿ.ಎಂ ಶಶಿಕಲಾ, ಇತರೆ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಬೆಂಗಳೂರಿನ ರಾಷ್ಟ್ರೀಯ ಕೌಶಲ್ಯ ಕೇಂದ್ರದಲ್ಲಿ ಕೌಶಲ್ಯ ಉತ್ಸವಕ್ಕೆ ಚಾಲನೆ

ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು: ರಾಷ್ಟ್ರೀಯ ಕೌಶಲ್ಯ ತರಬೇತಿ ಸಂಸ್ಥೆಯ ವತಿಯಿಂದ ಕೌಶಲ್ಯ ಉತ್ಸವ ಬೆಂಗಳೂರಿನ ಕೌಶಲ್ಯ ಭವನದಲ್ಲಿ ನಡೆಯಿತು.

ಒಂದು ದಿನದ ಕೌಶಲ್ಯ ಉತ್ಸವಕ್ಕೆ ಐಎಸ್‌ಡಿಎಸ್ ರಾಷ್ಟ್ರೀಯ ನಿರ್ದೇಶಕ ಬಿ.ಎನ್ ಶ್ರೀಧರ್, ಸಿಲಿಕಾನ್ ಮೈಕ್ರೋ ಸಿಸ್ಟಮ್‌ನ ಎಂ.ಎಸ್.ಜೆ ಆರಾಧ್ಯ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಬಿ.ಎನ್.ಶ್ರೀಧರ್, ಭಾರತ ಈಗ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶವಾಗಿದೆ. ಜಾಗತಿಕವಾಗಿ ಭಾರತ ಆರ್ಥಿಕವಾಗಿ ಬಲಿಷ್ಠವಾದ ಆರನೇ ಸ್ಥಾನ ಹೊಂದಿದ ದೇಶವಾಗಿದೆ. ಭಾರತ ಮೊದಲ ಸ್ಥಾನಕ್ಕೆ ಬರಬೇಕಾದರೆ ಮಾನವ ಕೌಶಲ್ಯ ಶಕ್ತಿಯನ್ನು ಹೆಚ್ಚಿಸಬೇಕಿದೆ. ಯಾವುದೇ ಕ್ಷೇತ್ರವಾಗಿರಲಿ ಕೌಶಲ್ಯತೆಯನ್ನು ಬೆಳಸಬೇಕಿದೆ.




ಕೌಶಲ್ಯ ತರಬೇತಿ ವಿಧಿ ವಿಧಾನಗಳು ಇನ್ನಷ್ಟು ಸುಧಾರಿಸಬೇಕಿದೆ, ಫ್ಯಾಷನ್ ಕ್ಷೇತ್ರ ಜಾಗತಿಕವಾಗಿ ಬೆಳೆಯುತ್ತಿದ್ದು ಈ ಕ್ಷೇತ್ರದಲ್ಲಿ ಕೌಶಲ್ಯತೆಯನ್ನು ಇನ್ನಷ್ಟು ಹೆಚ್ಚಿಸಬೇಕಿದೆ ಎಂದು ಹೇಳಿದರು.

ಯುಡಿ ಎಕ್ಸ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜೀಸ್‌ನ ವೆಂಕಟೇಶ್ ಸುಕ್ಕದ್ ಮಾತನಾಡಿ, ಬೆಂಗಳೂರಿನ ಕೌಶಲ್ಯ ತರಬೇತಿ ಕೇಂದ್ರ ಭವನದಲ್ಲಿ ವಿವಿಧ ಉದ್ಯಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೌಶಲ್ಯ ತರವೇತಿ ನೀಡಲಾಗುತ್ತಿದೆ.ದೇಶದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಉತ್ತಮ ತರಬೇತಿ ಪಡಯುತ್ತಿದ್ದಾರೆ ಎಂದರು.

ಕೌಶಲ್ಯ ತರಬೇತಿ ಕೇಂದ್ರದ ಉಪ ನಿರ್ದೇಶಕ ಬಿ.ವಿ.ಸುದರ್ಶನ್ ಮಾತನಾಡಿ, ಕೇಂದ್ರ ಸರ್ಕಾರದ ಈ ಕೌಶಲ್ಯ ತರಬೇತಿ ಕೇಂದ್ರದಲ್ಲಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಿ ಉದ್ದಿಮೆಗಳಾಗುವಂತೆ ಸಜ್ಜುಗೊಳಿಸಲಾಗುತ್ತದೆ. ವಿಶೇಷವಾಗಿ ಮಹಿಳೆಯರು ಉದ್ಯಮ ಕ್ಷೇತ್ರದಲ್ಲಿ ಛಾಪು ಮೂಡಿಸುತ್ತಿದ್ದಾರೆ. ಉದ್ಯಮ ಕೈಗೊಳ್ಳಲು ಕೇಂದ್ರ ಸರ್ಕಾರದಿಂದ ಎಲ್ಲ ನೆರವು ನೀಡಲಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಸಿಐಟಿಇ ಉಪ ನಿರ್ದೇಶಕ ಕೆ.ಆರ್. ಹಾಲಪ್ಪ ಶೆಟ್ಟಿ, ಕ್ವೆಸ್ಟ್ ಅಲಯನ್ಸ್‌ನ ನಿರ್ದೇಶಕಿ ನಿಖಿತಾ, ರಾಷ್ಟ್ರೀಯ ಕೌಶಲ್ಯ ತರಬೇತಿ ಕೇಂದ್ರದ ಪ್ರಾಂಶುಪಾಲ ವಿ.ಬಾಬು ಸೇರಿದಂತೆ ಅನೇಕರು ಹಾಜರಿದ್ದರು.